# 7ನೇ ತರಗತಿಯ ಸಾಮಾನ್ಯ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ FAQ'S

**ಪ್ರಶ್ನೆ 1 : ಈ ಪರೀಕ್ಷೆಯು ಯಾವ ಶಾಲೆಗಳಿಗೆ ನಡೆಯುತ್ತದೆ?**

**ಉತ್ತರ :** ರಾಜ್ಯ ಪಠ್ಯಕ್ರಮವನ್ನು ಅನುಸರಿಸುವ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳು. ಆದರ್ಶ ವಿದ್ಯಾಲಯಗಳು, ಮೊರಾರ್ಜಿ ದೇಸಾಯಿ ಶಾಲೆಗಳು ಸೇರಿದಂತೆ ಎಲ್ಲಾ ವಸತಿ ಶಾಲೆಗಳು, ಕಾರ್ಪೋರೇಷನ್ ಶಾಲೆಗಳು ಹಾಗೂ ಇತರೆ ಶಾಲೆಗಳು.

**ಪ್ರಶ್ನೆ 2 : ಪರೀಕ್ಷೆಯು ಯಾವ ಪಠ್ಯವಸ್ತುವನ್ನು ಒಳಗೊಂಡಿರುತ್ತದೆ?**

**ಉತ್ತರ :** ದ್ವಿತೀಯ ಸೆಮಿಸ್ಟರ್‌ಗೆ ಒಳಪಡುವ ಸಂಪೂರ್ಣ ಪಠ್ಯವಸ್ತುವನ್ನು ಒಳಗೊಂಡಿರುತ್ತದೆ

**ಪ್ರಶ್ನೆ 3 : ಸಾಮಾನ್ಯ ಮೌಲ್ಯಾಂಕನವು ಯಾವ ದಿನಾಂಕಗಳಂದು ನಡೆಯುತ್ತವೆ?**

**ಉತ್ತರ :** 16.03.2020 ರಿಂದ 21.03.2020 ರವರೆಗೆ ನಡೆಸಲಾಗುವುದು.

**ಪ್ರಶ್ನೆ 4 : ಸಾಮಾನ್ಯ ಮೌಲ್ಯಾಂಕನವು ಯಾವ ರೀತಿ ಹಾಗೂ ಎಲ್ಲಿ ನಡೆಯುತ್ತದೆ?**

**ಉತ್ತರ :** ಸಾಮಾನ್ಯ ಮೌಲ್ಯಾಂಕನವನ್ನು ಶಾಲಾ ಹಂತದಲ್ಲಿಯೇ, ಶಾಲಾ ಆವರಣದಲ್ಲಿಯೇ ಇತರೆ ತರಗತಿಗಳಂತೆ ತರಗತಿಯ ವಾತಾವರಣದಲ್ಲಿಯೇ ನಡೆಯುತ್ತದೆ.

**ಪ್ರಶ್ನೆ 5 : ಸಂಕಲನಾತ್ಮಕ ಮೌಲ್ಯಮಾಪನವನ್ನು ಮತ್ತೊಮ್ಮೆ ಶಾಲಾಹಂತದಲ್ಲಿ ಮಾಡಬೇಕೆ?**

**ಉತ್ತರ :** ಸಂಕಲನಾತ್ಮಕ ಮೌಲ್ಯಮಾಪನ–2(SA-2) ಬದಲಾಗಿ ಸಾಮಾನ್ಯ ಮೌಲ್ಯಾಂಕನವನ್ನು ನಡೆಸಲಾಗುತ್ತಿದ್ದು, ಶಾಲಾ ಹಂತದಲ್ಲಿ ಪುನಃ SA-2 ನಡೆಸುವ ಅವಶ್ಯಕತೆ ಇರುವುದಿಲ್ಲ.

**ಪ್ರಶ್ನೆ 6 : ಸಾಮಾನ್ಯ ಮೌಲ್ಯಾಂಕನದ ಪ್ರಶ್ನೆ ಪತ್ರಿಕೆಯ ರೂಪುರೇಷೆಯು (ಪ್ರಶ್ನೆಗಳ ಸಂಖ್ಯೆ, ಅಂಕಗಳು) ಹೇಗಿರುತ್ತದೆ?**

**ಉತ್ತರ :** ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಗಳು ಹಾಗೂ ಕನ್ನಡ ಹಾಗೂ ಆಂಗ್ಲ ಮಾಧ್ಯಮದ ಕೋರ್ ವಿಷಯಗಳ ಮಾದರಿ ಪ್ರಶ್ನೆ ಪತ್ರಿಕೆಗಳು ಕೆ.ಎಸ್.ಇ.ಇ.ಬಿ ವೆಬ್ ಜಾಲತಾಣದಲ್ಲಿ ಲಭ್ಯವಿದೆ.

ಒಟ್ಟು 40 ಅಂಕಗಳಿಗೆ ಲಿಖಿತ ರೂಪದ ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಂತೆ 24 ಪ್ರಶ್ನೆಗಳನ್ನು ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಉತ್ತರಿಸಲು ಪ್ರತಿ ವಿಷಯಕ್ಕೆ 1 ಗಂಟೆ 30 ನಿಮಿಷಗಳ ಕಾಲಾವಕಾಶವನ್ನು ನಿಗದಿಪಡಿಸಲಾಗಿದೆ. ವಿದ್ಯಾರ್ಥಿಗಳು ಉತ್ತರಿಸಲು ಪ್ರಶ್ನೋತ್ತರ ಪತ್ರಿಕೆಯಲ್ಲಿಯೇ ಜಾಗವನ್ನು ನೀಡಲಾಗಿದೆ. ಪ್ರಶ್ನೋತ್ತರ ಪತ್ರಿಕೆಯು ಒಂದು ಅಂಕದ 12 ಪ್ರಶ್ನೆಗಳು, ಎರಡು ಅಂಕದ 10 ಪ್ರಶ್ನೆಗಳು, ನಾಲ್ಕು ಅಂಕದ 02 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**ಪ್ರಶ್ನೆ 7 : ಸಹಾಯವಾಣಿಯ ಸಂಖ್ಯೆ**

**ಉತ್ತರ :** 080–23310075 ಮತ್ತು 080–23310076

**ಪ್ರಶ್ನೆ 8 : ಸಾಮಾನ್ಯ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ ನೀಡಲು ಮಕ್ಕಳ ಮಾಹಿತಿಯನ್ನು ಯಾವ ಮೂಲದಿಂದ ಪಡೆಯಲಾಗಿದೆ?**

**ಉತ್ತರ :** ಎಸ್.ಎ.ಟಿ.ಎಸ್ ನಲ್ಲಿ ಶಾಲೆಗಳಿಂದ ಫೀಡ್ ಮಾಡಿರುವ ಶಾಲಾವಾರು, ತರಗತಿವಾರು, ಮಾಧ್ಯಮವಾರು, ಭಾಷಾವಾರು ಮಾಹಿತಿಗಳನ್ನು ಆಧರಿಸಿ ಪ್ರಶ್ನೆ ಪತ್ರಿಕೆ ಸರಬರಾಜಾಗುತ್ತದೆ.

**ಪ್ರಶ್ನೆ 9 : ಮೌಖಿಕ ಪರೀಕ್ಷೆಯನ್ನು ಯಾವಾಗ ನಡೆಸಬೇಕು?**

**ಉತ್ತರ :** ಈ ಹಿಂದಿನ ವರ್ಷಗಳಲ್ಲಿ ನಡೆಸಿದಂತೆಯೇ ತಮ್ಮ ತಮ್ಮ ಶಾಲಾಹಂತದಲ್ಲೆ ನಡೆಸುವುದು. ಮೌಖಿಕ ಪರೀಕ್ಷೆಗೆಂದು ಕೆ.ಎಸ್.ಕ್ಯು.ಎ.ಎ.ಸಿಯಿಂದ ಯಾವುದೇ ಪ್ರಶ್ನೆಪತ್ರಿಕೆ ನೀಡುವುದಿಲ್ಲ.

**ಪ್ರಶ್ನೆ 10 : ಗೈರು ಹಾಜರಾದ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ನಡೆಸಬಹುದೇ?**

**ಉತ್ತರ :** SA-2 ಬದಲಾಗಿ ಸಾಮಾನ್ಯ ಮೌಲ್ಯಾಂಕನ ನಡೆಯುತ್ತಿರುವ ಕಾರಣ ಯಾವುದೇ ವಿದ್ಯಾರ್ಥಿಯು ಗೈರುಹಾಜರಾಗದಂತೆ ಕ್ರಮವಹಿಸುವುದು.

**ಪ್ರಶ್ನೆ 11 : ಎಸ್.ಎ.ಟಿ.ಎಸ್. ನಲ್ಲಿ ಭಾಷಾ ವಿನಾಯಿತಿಗೆ ಒಳಪಡುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಬೇಕೆ?**

**ಉತ್ತರ :** ಇಲ್ಲ

**ಪ್ರಶ್ನೆ 12 : ಸಾಮಾನ್ಯ ಮೌಲ್ಯಾಂಕನದ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳು ಬೇರೆ ಇರುತ್ತವೆಯೇ?**

**ಉತ್ತರ :** ಸಾಮಾನ್ಯ ಮೌಲ್ಯಾಂಕನದಲ್ಲಿ ವಿದ್ಯಾರ್ಥಿಗಳು ಉತ್ತರಿಸಲು ಪ್ರಶ್ನೋತ್ತರ ಪತ್ರಿಕೆಗಳನ್ನು (Question cum Answer booklet) ನೀಡಲಾಗುವುದು. ಪ್ರತಿ ಪ್ರಶ್ನೆಯ ಕೆಳಗೆ ಉತ್ತರಿಸಲು ಸ್ಥಳಾವಕಾಶವನ್ನು ನೀಡಲಾಗಿರುತ್ತದೆ. ಯಾವುದೇ ಹೆಚ್ಚುವರಿ ಹಾಳೆಗಳನ್ನು ನೀಡಲಾಗುವುದಿಲ್ಲ.

**ಪ್ರಶ್ನೆ 13 : ಮೌಲ್ಯಮಾಪನ (Evaluation) ಕಾರ್ಯವು ಎಲ್ಲಿ ನಡೆಯುತ್ತದೆ?**

**ಉತ್ತರ :** ಮೌಲ್ಯಮಾಪನ ಕಾರ್ಯವನ್ನು ಆಯಾ ಶಾಲಾ ಹಂತದಲ್ಲಿಯೇ ವಿಷಯ ಬೋಧಿಸುವ ಶಿಕ್ಷಕರಿಂದಲೇ ನಡೆಸುವುದು.

**ಪ್ರಶ್ನೆ 14 : ವಿದ್ಯಾರ್ಥಿಗಳಿಗೆ ಒ.ಎಂ.ಆರ್ ಹಾಳೆಗಳನ್ನು ನೀಡಲಾಗುತ್ತದೆಯೇ?**

**ಉತ್ತರ :** ಇಲ್ಲ. ಆದರೆ ವಿದ್ಯಾರ್ಥಿಗಳು ಉತ್ತರಿಸಿದ ಪ್ರಶ್ನೋತ್ತರ ಪತ್ರಿಕೆಗಳನ್ನು ಆಯಾ ಶಾಲಾ ಹಂತದಲ್ಲಿಯೇ, ವಿಷಯ ಬೋಧಿಸುವ ಶಿಕ್ಷಕರು ಮೌಲ್ಯಮಾಪನ ಮಾಡಿ, ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಶಿಕ್ಷಕರೆ ಒ.ಎಂ.ಆರ್ ನಲ್ಲಿ ಭರ್ತಿ ಮಾಡುವುದು. ಶಿಕ್ಷಕರು ಒ.ಎಂ.ಆರ್ ಭರ್ತಿ ಮಾಡುವ ವಿಧಾನದ ಬಗ್ಗೆ ಪ್ರತ್ಯೇಕವಾಗಿ ವಿವರವಾದ ಸುತ್ತೋಲೆಯನ್ನು ನೀಡಲಾಗುವುದು.

**ಪ್ರಶ್ನೆ 15 : ಆದರ್ಶ ವಿದ್ಯಾಲಯಗಳಿಗೆ ಪ್ರತ್ಯೇಕ ಪ್ರಶ್ನೆಪತ್ರಿಕೆ ನೀಡಲಾಗುತ್ತದೆಯೇ?**

**ಉತ್ತರ :** ಆದರ್ಶ ವಿದ್ಯಾಲಯಗಳಿಗೆ ಪ್ರಥಮ ಭಾಷೆ ಇಂಗ್ಲೀಷ್ (Honey Comb) ಮತ್ತು ತೃತೀಯ ಭಾಷೆ ಹಿಂದಿ (Durva-II) ವಿಷಯಗಳಿಗೆ ಮಾತ್ರ ಪ್ರತ್ಯೇಕವಾಗಿ ಪ್ರಶ್ನೋತ್ತರ ಪತ್ರಿಕೆಗಳನ್ನು ನೀಡಲಾಗುವುದು. ಉಳಿದಂತೆ ದ್ವಿತೀಯ ಭಾಷೆ ಕನ್ನಡ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ಪಠ್ಯಕ್ರಮ ಒಂದೇ ಆಗಿರುವುದರಿಂದ ಸದರಿ ಪ್ರಶ್ನೋತ್ತರ ಪತ್ರಿಕೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

**ಪ್ರಶ್ನೆ 16 : ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ದಾಖಲಿಸಲು ಶಿಕ್ಷಕರಿಗೆ ನೀಡುವ ಒ.ಎಂ.ಆರ್ ನಲ್ಲಿ ಯಾವ ಅಂಕಗಳನ್ನು ದಾಖಲಿಸಬೇಕು? ಅಂದರೆ 40 ಅಂಕಗಳ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ದಾಖಲಿಸಬೇಕೆ? ಅಥವಾ ಮೌಖಿಕ 10 ಅಂಕಗಳನ್ನೂ ಸೇರಿಸಿ 50 ಅಂಕಗಳನ್ನು ದಾಖಲಿಸಬೇಕೇ?**

**ಉತ್ತರ :** ರಾಜ್ಯ ಹಂತದಿಂದ ಸಾಮಾನ್ಯ ಮೌಲ್ಯಾಂಕನಕ್ಕೆ ನೀಡಲಾಗುವ ಲಿಖಿತ ರೂಪದ ಪ್ರಶ್ನೋತ್ತರ ಪತ್ರಿಕೆಗೆ ನಿಗಧಿಪಡಿಸಲಾದ 40 ಅಂಕಗಳಲ್ಲಿ ವಿದ್ಯಾರ್ಥಿಯು ಗಳಿಸಿದ ಅಂಕಗಳನ್ನು ಮಾತ್ರ ರಾಜ್ಯ ಕಛೇರಿಯಿಂದ ನೀಡಲಾಗುವ ಒ.ಎಂ.ಆರ್‌ನಲ್ಲಿ ದಾಖಲಿಸಬೇಕು.

**ಪ್ರಶ್ನೆ 17 : ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು ಹಾಗೂ ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಇತರೆ ಸಿಬ್ಬಂದಿಗಳು Smart Phone/Phone ಬಳಸಲು ಅವಕಾಶವಿದೆಯೆ?**

**ಉತ್ತರ :** ಮುಖ್ಯ ಅಧೀಕ್ಷಕರು ಪರೀಕ್ಷಾ ಕಾರ್ಯದ ತುರ್ತು ವಿಷಯಗಳಿಗೆ ಬೇಸಿಕ್ ಸೆಟ್ ಮಾತ್ರ ಬಳಸುವುದು. ಕಸ್ಟೋಡಿಯನ್, ಕೊಠಡಿ ಮೇಲ್ವಿಚಾರಕರು ಹಾಗೂ ಇನ್ನಿತರೆ ಸಿಬ್ಬಂದಿಗಳು Smart Phone/Phone ಬಳಸಲು ಅವಕಾಶವಿರುವುದಿಲ್ಲ. ಶಲೆಯ ಮುಖ್ಯ ಶಿಕ್ಷಕರು ಶಲೆಯ ಎಲ್ಲಾ ಸಿಕ್ಷಕರ/ಸಿಬ್ಬಂದಿಗಳ ಮೊಬೈಲ್ ಫೋನ್ ಅನದನು ಪರೀಕ್ಷಾ ಪೂರ್ವದಲ್ಲೆ ತಮ್ಮ ವಶಕ್ಕೆ ತೆಗೆದುಕೊಂಡು ಅಲ್ಮೇರಾದಲ್ಲಿಟ್ಟು ಸೀಲ್ ಮಾಡುವುದು. ಪರೀಕ್ಷೆ ಮುಗಿದ ನಂತರ ನೀಡುವುದು.

**ಪ್ರಶ್ನೆ 18 :** **ಪ್ರಶ್ನೋತ್ತರ ಪತ್ರಿಕೆಗಳಲ್ಲಿ version ಇದೆಯೇ?**

**ಉತ್ತರ :** version ಇರುವುದಿಲ್ಲ.

**ಪ್ರಶ್ನೆ 19 :** **ಮೌಲ್ಯಮಾಪನದ ನಂತರ ಪ್ರಶ್ನೋತ್ತರ ಪತ್ರಿಕೆಗಳನ್ನು ಏನು ಮಾಡುಬೇಕು?**

**ಉತ್ತರ :** ಶಾಲಾ ಹಂತದಲ್ಲಿಯೇ ಪ್ರಶ್ನೋತ್ತರ ಪತ್ರಿಕೆಗಳನ್ನು 04 ತಿಂಗಳ ಕಾಲ ಕಾಯ್ದಿರಿಸುವುದು.

**ಪ್ರಶ್ನೆ 20:** **ಮಾದರಿ ಪ್ರಶ್ನೆ ಪತ್ರಿಕೆಗಳು ಲಭ್ಯವಾಗುವುದೆ?**

**ಉತ್ತರ :** ಕೆ.ಎಸ್.ಇ.ಇ.ಬಿ ವೆಬ್‌ಜಾಲತಾಣದಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳು ಲಭ್ಯವಿದೆ.

**ಪ್ರಶ್ನೆ 21 :** **ಗೃಹಾಧಾರಿತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಹೇಗೆ ನಡೆಸುವುದು?**

**ಉತ್ತರ :** ಈ ಹಿಂದಿನ ವರ್ಷಗಳಲ್ಲಿ ನಡೆಸಿದಂತೆಯೇ ನಡೆಸುವುದು.

**ಪ್ರಶ್ನೆ 22 :** **ದೈಹಿಕ ಶಿಕ್ಷಣ ಪರೀಕ್ಷೆಯನ್ನು ಯಾವಾಗ ನಡೆಸಬೇಕು?**

**ಉತ್ತರ :** ಈಗಾಗಲೇ 16-03-2020 ರಿಂದ 21-03-2020 ರವರೆಗೆ ನಿಗದಿಯಾಗಿರುವ ಸಾಮಾನ್ಯ ಮೌಲ್ಯಾಂಕನ ಪರೀಕ್ಷಾ ದಿನಾಂಕವನ್ನು ಹೊರತು ಪಡಿಸಿ ಉಳಿದ ದಿನಗಳಂದು ನಡೆಸುವುದು.

**ಪ್ರಶ್ನೆ 23 :** **ಕೀ ಉತ್ತರಗಳು ವೆಬ್‌ಜಾಲತಾಣದಲ್ಲಿ ಲಭ್ಯವಾಗುತ್ತದೆಯೇ?**

**ಉತ್ತರ :** ಹೌದು.

**ಪ್ರಶ್ನೆ 24 :** **ಕೊಠಡಿ ಮೇಲ್ವಿಚಾರಕರ ಕೊರತೆಯಾದಲ್ಲಿ ಏನು ಮಾಡುವುದು?**

**ಉತ್ತರ :** ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಲಿಖಿತ ಅನುಮತಿ ಪಡೆದು ಕೊಠಡಿ ಮೇಲ್ವಿಚಾರಕರನ್ನು ನೇಮಿಸಿಕೊಳ್ಳುವುದು.

**ಪ್ರಶ್ನೆ 25 :** **ರಾಜ್ಯ ಕಛೇರಿಯಿಂದ 7ನೇ ತರಗತಿಯ ಸಾಮಾನ್ಯ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಹಾಜರಾತಿ ತ:ಖ್ತೆ (Attendance sheet) ಕಳುಹಿಸಲಾಗುತ್ತದೆಯೇ?**

**ಉತ್ತರ :** ಇಲ್ಲ. ನಿಮ್ಮ ಹಂತದಲ್ಲಿಯೇ ಸಿದ್ಧಪಡಿಸಿಕೊಳ್ಳುವುದು.